


ವಿ+ಮಾನ: ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಎರಡನೇ ಟರ್ಮಿನಲ್‌ನಲ್ಲಿರುವ ತಾವು ರೂಪಿಸಿದ ಕಲಾಕೃತಿಯ ಎದುರು ಎಲ್‌.ಎನ್‌. ತಲ್ಲೂರ್

◆ **ನೀವು ಕಲ್ಲು-ಮರ-ಲೋಹ-ಬಟ್ಟೆ ಮುಂತಾದ ಸಾಮಗ್ರಿಗಳಲ್ಲಿ ಕೆಲಸ ಮಾಡೋರು. ನಿಮ್ಮ ರತ್ನಗಂಬಳಿ ಕುರಿತ 'ಇಂಟರ್‌ಫಿಯರೆನ್ಸ್' ಕಲಾಕೃತಿಯಲ್ಲಿ ಫೋಟೊಗ್ರಫಿ ಮತ್ತು ಸೌಂಡ್ ರೆಕಾರ್ಡಿಂಗ್ ತಂತ್ರಜ್ಞಾನ ಪರಿಣಾಮಕಾರಿಯಾಗಿ ಬಳಕೆಯಾಗಿವೆ. ಒಂದು ಮಾಧ್ಯಮದ ಕಲಾಸೃಷ್ಟಿಯಲ್ಲಿ ಇನ್ನೊಂದು ಮಾಧ್ಯಮದ ಪಾತ್ರವಹಿಸುವ ಈ ಪರಿ ವಿಶೇಷವಾಗಿದೆ.**

ಯಾವುದೇ ಒಂದು ಭಾವವನ್ನು ಅಭಿವ್ಯಕ್ತಿ ಮಾಡಬೇಕಾದ್ರೆ, ಅದನ್ನು ಹೀರಿಕೊಂಡು ನಮ್ಮ ಅನುಭವ ಮಾಡಿಕೋಬೇಕಾದ್ರೆ, ಪಂಚೇಂದ್ರಿಯಗಳ ಉಪಯೋಗ ಮುಖ್ಯ. ಆದರೆ, ನಮ್ಮ ಆಯುಷ್ಯ ಬಹಳ ಕಮ್ಮಿ. 80-90 ವರ್ಷಗಳಲ್ಲಿ 40-50 ವರ್ಷ ಮಾತ್ರ ಆಕ್ಟೀವ್ ಆಗಿರ್ತೇವೆ. ಪಂಚೇಂದ್ರಿಯಗಳನ್ನು ಕೆಲವು ಏರಿಯಾಗಳಲ್ಲಿ ಶಾರ್ಪಾಗಿ ಇಟ್ಟುಕೊಳ್ಳಬೇಕು. ಆದರೆ, ನಾವು ಆ ಸೆನ್ಸಿಟಿವಿಟಿಯನ್ನು ಬೆಳೆಸುವ ಎಕ್ಸರ್ಸೈಸ್ ಮಾಡೋದಿಲ್ಲ. ಫೋಟೊಗ್ರಫಿ ಅಥವಾ ಟೆಕ್ನಿಕಲಿ ಯಾವುದೇ ಕ್ಷೇತ್ರದಲ್ಲಿ, ಎಲ್ಲಾ ಮಾಧ್ಯಮಕ್ಕೂ ಅದರದ್ದೇ ಆದ ಶಕ್ತಿ ಇರುತ್ತೆ. 'ಇಂಟರ್‌ಫಿಯರೆನ್ಸ್' ಕಲಾಕೃತಿಯಲ್ಲಿ ಆವೊಂದು ಸಂದರ್ಭವನ್ನು ವಿವರಣೆ ಮಾಡೋಕೆ ವಿಡಿಯೊ ಅಲ್ಲದೆ ಬೇರೆ ಯಾವ ಮಾಧ್ಯಮದಿಂದಲೂ ಸಾಧ್ಯ ಇರಲಿಲ್ಲ. ಒಂದು ಮಾಧ್ಯಮದಲ್ಲಿ ಕೆಲಸ ಮಾಡಬೇಕಾದ್ರೆ ನಾವು ತೆಗೆದುಕೊಳ್ಳುವ ವಿಷಯವೇ, ತನಗೆ ಬೇಕಾದ ಮಾಧ್ಯಮವನ್ನ ಡಿಮ್ಯಾಂಡ್ ಮಾಡುತ್ತೆ – ನನ್ನನ್ನು ಫಿಲ್ಮ್ ಆಗಿ ಮಾಡು, ಸ್ಕಲ್ಪ್ಚರ್ ಆಗಿ ಮಾಡು, ಪೈಂಟಿಂಗ್ ಆಗಿ ಮಾಡು ಅಂತ ಅದು ಹೇಳಬೇಕು.

◆ **ಆಧುನಿಕ ಕಲೆ ನೋಡೋದಕ್ಕೆ ತರಬೇತಿ ಬೇಕು. ಇಲ್ಲದಿದ್ದರೆ ಈ ಕಲಾಕೃತಿಯ ಅರ್ಥ ಏನು ಅಂತ ಸರಳವಾಗಿ ಕೇಳಿಬಿಡ್ತಾರೆ ಅಂತ ಸಾಮಾನ್ಯವಾಗಿ ಕಲಾವಿದರು ದೂರುವುದುಂಟು.**

ನಮ್ಮಲ್ಲಿ ಬೆಳಿಗ್ಗೆ ಎದ್ದ ಕೂಡ್ಲೆ ಯಾವ ಮಗ್ಗುಲಿಂದ ಏಳ್ತೇವೆ, ಹೇಗೆ ಹಲ್ಲುಜ್ಜುತ್ತೇವೆ ಎನ್ನುವುದು ಸೇರಿದಂತೆ ದಿನದ ಪ್ರತಿಯೊಂದು ಚಟುವಟಿಕೆ ಸ್ಟ್ಯಾಂಡರ್ಡೈಸ್ ಆಗಿದೆ, ಕಂಡಿಶನಿಂಗ್ ಆಗಿದೆ. ನಾವು ಸಾಮಾನ್ಯವಾಗಿ ಬಳಸುವಂತಹ ವರ್ಬಲ್ ಲ್ಯಾಂಗ್ವೇಜ್ ಏನಿದೆ, ಅದು ಪ್ರಶ್ನೆ ಮತ್ತು ಉತ್ತರದ ಅಭ್ಯಾಸಕ್ಕೆ ದೂಡಿಬಿಟ್ಟಿದೆ.